ಈ ಪ್ರಶ್ನೆ ಪುಸ್ತಿಕೆಯಲ್ಲಿ ಸಾಮಾನ್ಯ ಕನ್ನಡ (ವಿಷಯ ಸಂಕೇತ : **286**) ಹಾಗೂ ಸಾಮಾನ್ಯ ಇಂಗ್ಲೀಷ್ (ವಿಷಯ ಸಂಕೇತ : **287**) ಎಂಬ ಎರಡು ವಿಷಯದ ಪ್ರಶ್ನೆ ಪತ್ರಿಕೆಗಳಿವೆ. ಅಭ್ಯರ್ಥಿಗಳು ಸಾಮಾನ್ಯ ಕನ್ನಡ ಅಥವಾ ಸಾಮಾನ್ಯ ಇಂಗ್ಲೀಷ್ ಇವುಗಳಲ್ಲಿ ಯಾವುದಾದರೂ ಒಂದನ್ನು ಮಾತ್ರ ಆರಿಸಿ ಮತ್ತು ಉತ್ತರಿಸಬೇಕು. ಅಭ್ಯರ್ಥಿಯು ತಾನು ಆಯ್ಕೆ ಮಾಡಿಕೊಂಡು ಉತ್ತರಿಸುವ ವಿಷಯದ ಮುಂದಿನ ವೃತ್ತವನ್ನು ಸ್ಪಷ್ಟವಾಗಿ ಒ.ಎಂ.ಆರ್. ಉತ್ತರ ಹಾಳೆಯಲ್ಲಿರುವ ನಿಗದಿತ ಸ್ಥಳದಲ್ಲಿ ಎನ್‌ಕೋಡ್ ಮಾಡತಕ್ಕದ್ದು.

**ಈ ಪ್ರಶ್ನೆ ಪುಸ್ತಿಕೆಯನ್ನು ತೆರೆಯುವಂತೆ ನಿಮಗೆ ತಿಳಿಸುವವರೆಗೂ ಇದನ್ನು ತೆರೆಯಕೂಡದು**

**2018**

2202784

SDA

**ಪ್ರಶ್ನೆ ಪತ್ರಿಕೆ ಶ್ರೇಣಿ**

# D

# ಪ್ರಶ್ನೆ ಪುಸ್ತಿಕೆ

# ಸಾಮಾನ್ಯ ಕನ್ನಡ (ಪತ್ರಿಕೆ II)

**ಸಮಯ : $1\frac{1}{2}$ ಗಂಟೆಗಳು** | **ವಿಷಯ ಸಂಕೇತ : 286** | **ಗರಿಷ್ಠ ಅಂಕಗಳು : 100**

## ಸೂಚನೆಗಳು

1. ಪರೀಕ್ಷೆ ಪ್ರಾರಂಭವಾದ ಕೂಡಲೇ ನಿಮ್ಮ ಪ್ರಶ್ನೆಪತ್ರಿಕೆಯಲ್ಲಿ ಅಮುದ್ರಿತ ಅಥವಾ ಹರಿದಿರುವ ಅಥವಾ ಬಿಟ್ಟು ಹೋಗಿರುವ ಪುಟಗಳು ಅಥವಾ ಪ್ರಶ್ನೆಗಳು ಇತ್ಯಾದಿಗಳು ಕಂಡುಬಂದಲ್ಲಿ ನಿಮ್ಮ ಒ.ಎಂ.ಆರ್. ಉತ್ತರ ಹಾಳೆಯಲ್ಲಿ ಮುದ್ರಿತವಾಗಿರುವ ಅದೇ ಶ್ರೇಣಿಯ ಪೂರ್ಣ ಪ್ರಶ್ನೆ ಪತ್ರಿಕೆಯೊಂದಿಗೆ ಬದಲಾಯಿಸಿ ಕೊಳ್ಳತಕ್ಕದ್ದು.
2. **ಅಭ್ಯರ್ಥಿಯು ಪ್ರಶ್ನೆ ಪತ್ರಿಕೆಯ ಶ್ರೇಣಿಯು, ತಮ್ಮ ಒ.ಎಂ.ಆರ್. ಉತ್ತರ ಹಾಳೆಯಲ್ಲಿ ಮುದ್ರಿತವಾಗಿರುವ ಅದೇ ಪ್ರಶ್ನೆಪತ್ರಿಕೆಯ ಶ್ರೇಣಿಯಾಗಿರುವುದೇ ಎಂಬುದನ್ನು ಖಚಿತಪಡಿಸಿಕೊಳ್ಳಬೇಕು. ವ್ಯತ್ಯಾಸಗಳು ಕಂಡುಬಂದಲ್ಲಿ, ಸಂವೀಕ್ಷಕರ ಗಮನಕ್ಕೆ ತರುವುದು ಮತ್ತು ಪ್ರಶ್ನೆಪತ್ರಿಕೆಯ ಶ್ರೇಣಿಯು ತಮಗೆ ಹೊಂದುವ (ಅದೇ) ಪ್ರಶ್ನೆ ಪತ್ರಿಕೆಯಾದ ಮತ್ತು ಒ.ಎಂ.ಆರ್. ಉತ್ತರ ಹಾಳೆಯಲ್ಲಿ ಮುದ್ರಿತವಾಗಿರುವ ಶ್ರೇಣಿಯ ಪ್ರಶ್ನೆ ಪತ್ರಿಕೆಯನ್ನೇ ಪಡೆಯತಕ್ಕದ್ದು.**
3. ಪಕ್ಕದಲ್ಲಿ ಒದಗಿಸಿರುವ ಪ್ರಶ್ನೆಪತ್ರಿಕೆಯ ಚೌಕದಲ್ಲೇ ನಿಮ್ಮ ನೋಂದಣಿ ಸಂಖ್ಯೆಯನ್ನು ನಮೂದಿಸಬೇಕು. ಪ್ರಶ್ನೆ ಪುಸ್ತಿಕೆಯಲ್ಲಿ ಬೇರೆ ಏನನ್ನೂ ಬರೆಯಬಾರದು.

| ನೋಂದಣಿ ಸಂಖ್ಯೆ | | | | | | |
|---|---|---|---|---|---|---|
| 3 | 0 | 2 | 7 | 3 | 4 | 9 |

4. **ಈ ಪ್ರಶ್ನೆ ಪುಸ್ತಿಕೆ 100 ಪ್ರಶ್ನೆಗಳನ್ನು ಒಳಗೊಂಡಿರುತ್ತದೆ.** ಪ್ರತಿಯೊಂದು ಪ್ರಶ್ನೆಯು **4** ಪ್ರತಿಕ್ರಿಯೆಗಳನ್ನು (ಉತ್ತರಗಳನ್ನು) ಒಳಗೊಂಡಿರುತ್ತದೆ. ನೀವು ಉತ್ತರ ಹಾಳೆಯಲ್ಲಿ ಗುರುತು ಮಾಡಬೇಕೆನಿಸುವ ಉತ್ತರವನ್ನು ಆಯ್ಕೆ ಮಾಡಿಕೊಳ್ಳಿ. ಒಂದು ವೇಳೆ ಅಲ್ಲಿ ಒಂದಕ್ಕಿಂತ ಹೆಚ್ಚು ಸರಿಯಾದ ಉತ್ತರಗಳಿವೆಯೆಂದು ನೀವು ಭಾವಿಸಿದರೆ ನಿಮಗೆ ಅತ್ಯುತ್ತಮವೆನಿಸುವ ಉತ್ತರಕ್ಕೆ ಗುರುತು ಮಾಡಿ. ಏನೇ ಆದರೂ ಪ್ರತಿ ಪ್ರಶ್ನೆಗೆ ನೀವು ಕೇವಲ ಒಂದು ಉತ್ತರವನ್ನು ಮಾತ್ರ ಆಯ್ಕೆ ಮಾಡಬೇಕು.
5. ಎಲ್ಲಾ ಉತ್ತರಗಳನ್ನು ನಿಮಗೆ ಒದಗಿಸಲಾಗಿರುವ ಪ್ರತ್ಯೇಕ ಒ.ಎಂ.ಆರ್. ಉತ್ತರ ಹಾಳೆಯ ಮೇಲೆ **ಕೇವಲ ಕಪ್ಪು ಅಥವಾ ನೀಲಿ ಶಾಯಿಯ ಬಾಲ್‌ಪಾಯಿಂಟ್ ಪೆನ್ನಿನಲ್ಲಿ ಮಾತ್ರ ಗುರುತು ಮಾಡಬೇಕು.** ಒ.ಎಂ.ಆರ್. ಉತ್ತರ ಪತ್ರಿಕೆ ಹಾಳೆಯಲ್ಲಿನ ವಿವರವಾದ ಸೂಚನೆಗಳನ್ನು ಗಮನಿಸುವುದು.
6. ಎಲ್ಲಾ ಪ್ರಶ್ನೆಗಳಿಗೆ ಸಮಾನ ಅಂಕಗಳು. **ಎಲ್ಲಾ ಪ್ರಶ್ನೆಗಳಿಗೆ ಉತ್ತರಿಸಿರಿ.** ನೀವು ಗಳಿಸುವ ಒಟ್ಟಾರೆ ಅಂಕಗಳು ನೀವು ಉತ್ತರ ಪತ್ರಿಕೆ ಹಾಳೆಯಲ್ಲಿ ಗುರುತು ಮಾಡುವ ಸರಿಯಾದ ಉತ್ತರಗಳ ಸಂಖ್ಯೆಯನ್ನು ಮಾತ್ರ ಆಧರಿಸಿರುತ್ತದೆ.
7. ಚಿತ್ತು ಕೆಲಸಕ್ಕಾಗಿ ಹಾಳೆಗಳನ್ನು ಪ್ರಶ್ನೆ ಪುಸ್ತಿಕೆಯ ಕೊನೆಯಲ್ಲಿ ಸೇರಿಸಲಾಗಿದೆ. ಪ್ರಶ್ನೆ ಪುಸ್ತಿಕೆಯ ಇನ್ನುಳಿದ ಯಾವ ಭಾಗದಲ್ಲಿಯೂ ನೀವು ಯಾವ ರೀತಿಯ ಗುರುತನ್ನು ಮಾಡತಕ್ಕದ್ದಲ್ಲ.
8. ಪರೀಕ್ಷೆಯ ಮುಕ್ತಾಯವನ್ನು ಸೂಚಿಸುವ ಅಂತಿಮ ಗಂಟೆ ಬಾರಿಸಿದ ತಕ್ಷಣವೇ ಒ.ಎಂ.ಆರ್. ಉತ್ತರ ಪತ್ರಿಕೆ ಹಾಳೆಯಲ್ಲಿ ಇನ್ನಾವುದೇ ಗುರುತು ಮಾಡುವುದನ್ನು ನಿಲ್ಲಿಸಬೇಕು. ಸಂವೀಕ್ಷಕರು ಬಂದು ನಿಮ್ಮಲ್ಲಿರುವ ಒ.ಎಂ.ಆರ್. ಉತ್ತರ ಹಾಳೆಯನ್ನು ತಮ್ಮ ವಶಕ್ಕೆ ಪಡೆದುಕೊಂಡು ಲೆಕ್ಕಕ್ಕೆ ತೆಗೆದುಕೊಳ್ಳುವವರೆಗೂ ನಿಮ್ಮ ನಿಮ್ಮ ಆಸನದಲ್ಲಿಯೇ ಕುಳಿತಿರತಕ್ಕದ್ದು.

**ಯಾವುದೇ ರೀತಿಯ ಮೊಬೈಲ್ ಫೋನ್, ಕ್ಯಾಲ್ಕುಲೇಟರ್ ಮತ್ತು ಇತರೆ ರೀತಿಯ ಎಲೆಕ್ಟ್ರಾನಿಕ್/ಕಮ್ಯೂನಿಕೇಷನ್ ಸಾಧನಗಳು ಇತ್ಯಾದಿಗಳನ್ನು ಪರೀಕ್ಷಾ ಕೇಂದ್ರದ ಆವರಣದೊಳಗೆ ತರುವುದನ್ನು ನಿಷೇಧಿಸಿದೆ.**

***Note :*** *English version of the instructions is printed on the back cover of this booklet.*

www.shikarat.com

ಸೂಚನೆ : ಕೆಳಗಿನ ವಾಕ್ಯಗಳಲ್ಲಿ ಖಾಲಿ ಬಿಟ್ಟಿರುವ ಜಾಗವನ್ನು ತುಂಬಲು ನಾಲ್ಕು ಉತ್ತರ ನೀಡಿದೆ. ಅವುಗಳಲ್ಲಿ ಸೂಕ್ತವಾದುದನ್ನು ಗುರುತಿಸಿ. (ಪ್ರಶ್ನೆ ಸಂಖ್ಯೆ 1 – 5)

ಉದಾಹರಣೆ: ಮೀನ್ ಎಂದರೆ

(1) ಹೊಳೆಯುವ

(2) ಮೀಯು

(3) ಮೇಯು

(4) ಆಕಾಶ

ಇಲ್ಲಿ "ಹೊಳೆಯುವ" ಎಂಬುದು "ಮೀನ್"ನ ಅರ್ಥವನ್ನು ಹೇಳುವ ಪದ ಆದುದರಿಂದ (1) ನ್ನು ಗುರುತಿಸಬೇಕು.

1. "ನಿಲ್ ಮನೆ" ಎಂದರೆ

(1) ಖಾಲಿ ಮನೆ

(2) ಹೊಸ ಮನೆ

(3) ನೆಂಟರ ಮನೆ

(4) ಉಳಿದುಕೊಳ್ಳುವ ಮನೆ

2. "ಖೇಚರರು" ಪದದ ಅರ್ಥ

(1) ಪ್ರಾಣಿಗಳು

(2) ಮನುಷ್ಯರು

(3) ರಾಕ್ಷಸರು

(4) ಗಂಧರ್ವರು

3. "ಜರ" ಎಂದರೆ

(1) ಮುಪ್ಪು

(2) ದಾರಿ

(3) ಮರ

(4) ದೇವತೆ

4. "ಕೆಪಿಗ" ಎಂದರೆ

(1) ದೀಪ

(2) ದಾರ

(3) ಬೀಗ

(4) ಹಕ್ಕಿ

5. "ಪ್ರಚ್ಛನ್ನ" ಎಂದರೆ

(1) ಪ್ರಚಂಡ

(2) ಪ್ರಪಂಚ

(3) ಗುಪ್ತ

(4) ಶಕ್ತಿ

www.shikarat.com

**ಸೂಚನೆ :** ಕೆಳಗೆ ಕೊಟ್ಟಿರುವ ನಾಲ್ಕು ಪದಗಳಲ್ಲಿ ಸಮಾನವಾದ ಅಂಶವಿರುವ ಮೂರು ಪದಗಳಿವೆ. ಭಿನ್ನವಾಗಿ ಉಳಿದಿರುವ ಪದವನ್ನು ಗುರುತಿಸಿ. *(ಪ್ರಶ್ನೆ ಸಂಖ್ಯೆ 6 – 11)*

ಉದಾಹರಣೆ :

(1) ಚುನಾವಣೆ

(2) ಆಸ್ಪತ್ರೆ

(3) ಮುಖ್ಯಮಂತ್ರಿ

(4) ಭಾಷಣ

ಇವುಗಳಲ್ಲಿ (1), (3), (4) ರಾಜಕೀಯಕ್ಕೆ ಸಂಬಂಧಿಸಿದ ಪದಗಳು ಭಿನ್ನರೂಪ (2) ಆಸ್ಪತ್ರೆ ಆದ್ದರಿಂದ (2) ನ್ನು ಗುರುತಿಸಬೇಕು.

6. (1) ಸವರ್ಣ ದೀರ್ಘ ಸಂಧಿ
(2) ಗುಣ ಸಂಧಿ
(3) ಜಸ್ತ್ವ ಸಂಧಿ
(4) ವೃದ್ಧಿ ಸಂಧಿ

7. (1) ಪಂಪ
(2) ಜನ್ನ
(3) ರನ್ನ
(4) ಪೊನ್ನ

8. (1) ಗೃಹ
(2) ಆಲಯ
(3) ಗ್ರಹ
(4) ನಿಕೇತನ

9. (1) ಹೆಮ್ಮರ
(2) ತಲೆ ನೋವು
(3) ಬೆಟ್ಟದಾವರೆ
(4) ಮರಗಾಲು

10. (1) ಅನಂತ ಮೂರ್ತಿ
(2) ಗಿರೀಶ್ ಕಾರ್ನಾಡ್
(3) ಚಂದ್ರಶೇಖರ ಕಂಬಾರ
(4) ಗೋಪಾಲ ಕೃಷ್ಣ ಅಡಿಗ

11. (1) ಹರಕೆಯ ಕುರಿ
(2) ಕಾಡು ಕುದುರೆ
(3) ಸಿರಿ ಸಂಪಿಗೆ
(4) ಕಿಂದರ ಜೋಗಿ

www.shikarat.com

***ಸೂಚನೆ : ಕೆಳಗೆ ಕೊಟ್ಟಿರುವ ನಾಲ್ಕು ಪದಗಳಲ್ಲಿ ಒಂದು ಮಾತ್ರ ಅಚ್ಚ ಕನ್ನಡ ಪದ. ಉಳಿದ ಮೂರು ಅನ್ಯ ಭಾಷಾ ಪದಗಳು ಕನ್ನಡ ಪದವನ್ನು ಗುರ್ತಿಸಿ. (ಪ್ರಶ್ನೆ ಸಂಖ್ಯೆ 12 – 15)***

ಉದಾಹರಣೆ :

(1) ಮೂಡಣ

(2) ಪೋಲೀಸ್

(3) ಖಾನಾವಳಿ

(4) ಸಾಬೂನು

ಇಲ್ಲಿ 'ಮೂಡಣ' ಒಂಬುದು ಅಚ್ಚ ಕನ್ನಡ ಪದ, ಆದುದರಿಂದ (1) ನ್ನು ಗುರ್ತಿಸಬೇಕು.

**12.** (1) ಗಾಳಿ

(2) ತುಪಾಕಿ

(3) ತೋಪು

(4) ಗಸ್ತಿ

**13.** (1) ಸುರಂಗ

(2) ದೀನಾರ

(3) ದ್ರಮ್ಮ

(4) ಚಿನ್ನ

**14.** (1) ತಾರೀಖು

(2) ಹಾಜರಿ

(3) ಬಾಗಿಲು

(4) ಖಜಾನೆ

**15.** (1) ಚಕ್ರವರ್ತಿ

(2) ಕೆಲಸ

(3) ಮಂತ್ರಿ

(4) ಅಧಿಕಾರ

***ಸೂಚನೆ : ಈ ಕೆಳಗೆ ಕೆಲವು ಕನ್ನಡದ ನುಡಿಗಟ್ಟುಗಳನ್ನು ಅವುಗಳ ಮುಂದೆ ನಾಲ್ಕು ಪರ್ಯಾಯ ರೂಪಗಳನ್ನು ನೀಡಿದೆ. ನುಡಿಗಟ್ಟಿನ ಅರ್ಥವನ್ನು ವಿವರಿಸುವ ರೂಪವನ್ನು ಆಯ್ಕೆಮಾಡಿ ಗುರುತಿಸಿ. (ಪ್ರಶ್ನೆ ಸಂಖ್ಯೆ 16 – 19)***

ಉದಾಹರಣೆ : 'ಕರತಲಾಮಲಕ'

(1) ಕೈಚಳಕ ತೋರು

(2) ಚೆನ್ನಾಗಿ ತಿಳಿದುಕೊಂಡದ್ದು

(3) ಕೈಯಿಂದ ಮುಖದ ತನಕ

(4) ಗೊತ್ತು ಎಂಬ ಅಹಂಕಾರ

ಇಲ್ಲಿ 'ಚೆನ್ನಾಗಿ ತಿಳಿದುಕೊಂಡದ್ದು' ಸರಿಯಾದ ಅರ್ಥ, ಆದ್ದರಿಂದ (2) ನ್ನು ಗುರ್ತಿಸಬೇಕು.

www.shikarat.com

16. 'ಕಣ್ತೆರೆಯುವುದು'

(1) ಕಣ್ಣನ್ನು ಬಿಡುವುದು

(2) ಕಣ್ಣೋಟವನ್ನು ಹರಿಸುವುದು

(3) ಜ್ಞಾನೋದಯವಾಗುವುದು

(4) ನಿದ್ದೆ ಮಾಡದಿರುವುದು

17. 'ಹೆಗಲು ಕೊಡು'

(1) ಸಹಾಯ ಮಾಡು

(2) ಹೆಣ ಹೊರು

(3) ಸಲಹೆ ಕೊಡು

(4) ಹೆಗಲ ಮೇಲೆ ಕೈಯಿಡು

18. 'ಭೂಮಿಗೆ ಭಾರ'

(1) ಭಾರವಾದ ವಸ್ತು

(2) ದಪ್ಪನೆಯ ಮನುಷ್ಯ

(3) ದೊಡ್ಡದಾದ ಪರ್ವತ

(4) ನಿಷ್ಪ್ರಯೋಜಕ

19. 'ಬಿಳಿಯಾನೆ'

(1) ನಿರುಪಯುಕ್ತ ಭಾರೀ ಖರ್ಚಿನ ಹುದ್ದೆ

(2) ಬಿಳಿಯರು ಸಾಕಿದ ಆನೆ

(3) ಅಧಿಕಾರಿಶಾಹಿಯ ವರ್ತನೆ

(4) ಶ್ವೇತ ವರ್ಣದ ಆನೆ

***ಸೂಚನೆ :*** ***ಕೆಳಗೆ ಕೊಟ್ಟಿರುವ ಪದಗಳಿಗೆ (ಪ್ರಶ್ನೆ ಸಂಖ್ಯೆ 20 - 25) ವಿರುದ್ಧಾರ್ಥಕ ಪದಗಳನ್ನು ಗುರ್ತಿಸಿ.***

ಉದಾಹರಣೆ : ಅಂತರ್ವಾಣಿ

(1) ಹೊರವಾಣಿ

(2) ದುರ್ವಾಣಿ

(3) ಬಹಿರ್ವಾಣಿ

(4) ಒಳಗಿನವಾಣಿ

ಇಲ್ಲಿ (3) ಬಹಿರ್ವಾಣಿ ಸರಿಯಾದ ಉತ್ತರ ಆದ್ದರಿಂದ (3) ನ್ನು ಗುರುತಿಸಿ.

20. ವಿಜೇತ

(1) ಪರಾಜಿತ

(2) ಗೆದ್ದವ

(3) ಅಪವಿಜೇತ

(4) ಅವಿಜೇತ

21. ಶೀತಲ

(1) ತಂಪು

(2) ಗಡಸು

(3) ದಗ್ಧ

(4) ಒರಟು

www.shikarat.com

22. ಮೂಲೋತ್ಪಾಟನ

(1) ಮೂಲೋಚ್ಚಾಟನ

(2) ಪ್ರತಿಷ್ಠಾಪನ

(3) ಮೂಲೋಪಯೋಗ

(4) ಸುಮಾರ್ಗ

23. ಕ್ಷುಧೆ

(1) ಹಸಿವು

(2) ಸಂಕಟ

(3) ಸಂತೃಪ್ತಿ

(4) ಸಂಪತ್ತು

24. ಯಾಚಕ

(1) ಯೋಗಿ

(2) ಬೇಡುವವ

(3) ಕೊಳ್ಳುಗ

(4) ದಾನಿ

25. ಸಾತ್ವಿಕ

(1) ಸತ್ವ

(2) ತಾಮಸ

(3) ಸತು

(4) ಶಕ್ತಿ

***ಸೂಚನೆ : ಕೆಳಗಿನ ಪದಗಳಿಗೆ ಅವುಗಳ ಮುಂದೆ ಸೂಚಿಸಿದ ಪರ್ಯಾಯ ರೂಪಗಳಲ್ಲಿ ಸಮಾನಾರ್ಥಕವಾದ ಅಥವಾ ಅತಿ ಸಮೀಪದ ಅರ್ಥವುಳ್ಳ ರೂಪಗಳನ್ನು ಗುರ್ತಿಸಿ. (ಪ್ರಶ್ನೆ ಸಂಖ್ಯೆ 26 – 30)***

ಉದಾಹರಣೆ : ಕಾನನ ಪದದ ಸಮಾನಾರ್ಥಕ

(1) ಕತ್ತಲು

(2) ತೋಟ

(3) ಕಾಡು

(4) ಕಾಡುವುದು

ಇಲ್ಲಿ 'ಕಾಡು' ಎಂಬುದು ಸರಿಯಾದ ಉತ್ತರ. ಆದ್ದರಿಂದ (3) ನ್ನು ಗುರ್ತಿಸಬೇಕು.

26. "ಜೊನ್ನ" ಪದದ ಸಮಾನಾರ್ಥ

(1) ಜೊನ್ನ

(2) ಬೆಳದಿಂಗಳು

(3) ಜೊನ್ನು

(4) ಜೊಂಡು

27. "ಸಹಸ್ರಾಕ್ಷ" ಪದದ ಸಮಾನಾರ್ಥ

(1) ಅರ್ಜುನ

(2) ಇಂದ್ರ

(3) ಚಂದ್ರ

(4) ನಾಗೇಂದ್ರ

www.shikarat.com

28. "ತತಿ" ಎಂಬುದರ ಸಮಾನಾರ್ಥಗಳು

(1) ಸಮೂಹ, ಗುಂಪು

(2) ಸಮೂಹ, ಸಮಯ

(3) ಸಮೂಹ, ಸ್ತುತಿ

(4) ಸಮೂಹ, ಗತಿ

29. "ಆಜ್ಯ" ಪದದ ಸಮಾನಾರ್ಥ

(1) ಅಜ್ಜ

(2) ತಪ್ಪು

(3) ಒಪ್ಪು

(4) ತುಪ್ಪ

30. "ದ್ರುಮ" ಪದದ ಸಮಾನಾರ್ಥ

(1) ದಮ್ಮ

(2) ದಮ್ಮು

(3) ಮರ

(4) ಧೂಮ್ರ

***ಸೂಚನೆ :*** *ಕೆಳಗಿನ ಪದಗಳನ್ನು ಬಿಡಿಸಿ ಬರೆದಿದೆ. ಅವುಗಳಲ್ಲಿ ಸರಿಯಾದುದನ್ನು ಗುರ್ತಿಸಿ. (ಪ್ರಶ್ನೆ ಸಂಖ್ಯೆ* ***31 – 33****)*

31. "ಮೆಲ್ನುಡಿ" ಇದನ್ನು ಬಿಡಿಸುವ ಕ್ರಮ

(1) ಮೆಲ್ಲಿತು + ನುಡಿ

(2) ಮೆಲ್ಲ + ನುಡಿ

(3) ಮೆಲ್ಲನೆ + ನುಡಿ

(4) ಮೆಲ್ಲನೆಯ + ನುಡಿ

32. "ಒಳಮನೆ" ಇದನ್ನು ಬಿಡಿಸಿ ಬರೆದರೆ

(1) ಒಳಗು + ಮನೆ

(2) ಒಳ + ಮನೆ

(3) ಮನೆಯ + ಒಳಗು

(4) ಮನೆಯಲ್ಲಿ + ಒಳಗು

33. "ನೂರ್ಛಾಸಿರ" ಇದನ್ನು ಬಿಡಿಸಿ ಬರೆದರೆ

(1) ನೂರ್ + ಸಾಸಿರ

(2) ನೂರ್ + ಸಾವಿರ

(3) ನೂರು + ಛಾಸಿರ

(4) ನೂರು + ಸಹಸ್ರ

www.shikarat.com

**ಸೂಚನೆ** : ಮುಂದೆ ಕೊಡಲಾದ ನಾಲ್ಕು ರೂಪಗಳಲ್ಲಿ ಸರಿಯಾದುದನ್ನು ಗುರ್ತಿಸಿ. (ಪ್ರಶ್ನೆ ಸಂಖ್ಯೆ 34 – 37)

ಉದಾಹರಣೆ :

(1) ಗ್ರಹಸ್ತ

(2) ಗೃಹಸ್ಥ

(3) ಗ್ರುಹಸ್ಥ

(4) ಗೃುಹಸ್ಥ

ಇಲ್ಲಿ 'ಗೃಹಸ್ಥ' ಸರಿಯಾದ ಉತ್ತರ. ಆದ್ದರಿಂದ (2) ನ್ನು ಗುರ್ತಿಸಬೇಕು.

**34.** (1) ಆಚಾತುರ್ಯ

(2) ಅಚಾತುರ್ಯ

(3) ಅಚುರ್ತಯ

(4) ಅಚಾತ್ರುಯ

**35.** (1) ನಿಶೇದಾರ್ಥಕ

(2) ನಿಷೇಧಾರ್ಥಕ

(3) ನಿಸೇದಾರ್ತಕ

(4) ನಿಷೆದ್ಧಾವರ್ತಕ

**36.** (1) ಪೆರೆದಲೆಯ

(2) ಪೆರದಲೆಯ

(3) ಪರದೆಲೆಯ

(4) ಪೆರೆದಲಯ

**37.** (1) ಅಭ್ಯಂಜನ

(2) ಆಭ್ಯಂಜನ

(3) ಅಬ್ಯಂಜನ

(4) ಹಬ್ಯಂಜನ

**ಸೂಚನೆ** : ಕೆಳಗಿನ ವಾಕ್ಯಗಳಲ್ಲಿ (ಪ್ರಶ್ನೆ ಸಂಖ್ಯೆ 38 – 41) ಗೆರೆ ಎಳೆಯಲಾದ ಪದಗಳಲ್ಲಿ ದೋಷವಿದ್ದರೆ ಅದನ್ನು ಸರಿಪಡಿಸಲು ಮುಂದೆ ಕೊಟ್ಟಿರುವ ಪರ್ಯಾಯ ರೂಪಗಳಲ್ಲಿ ಸೂಕ್ತವಾದುದನ್ನು ಗುರ್ತಿಸಿ. ದೋಷವಿಲ್ಲದಿದ್ದರೆ ಸುಧಾರಣೆ ಬೇಕಿಲ್ಲ, ಆಗ (4) ನ್ನು ಗುರುತಿಸಿ.

ಉದಾಹರಣೆ : ಮಕ್ಕಳು ಸಂಗೀತವನ್ನು ಸುಸ್ರಾವ್ಯವಾಗಿ **ಆಡಿದರು**.

(1) ಹಾಡಿದರು

(2) ಆಲಿಸಿದರು

(3) ಮಾಡಿಸಿದರು

(4) ಆಲಿಸಿದರು

ಇಲ್ಲಿ "ಆಡಿದರು" ಎಂಬುದು ದೋಷವಾಗಿದ್ದು "ಹಾಡಿದರು" ಎಂದಿರಬೇಕು. ಆದುದರಿಂದ (1) ನ್ನು ಗುರುತಿಸಬೇಕು.

www.shikarat.com

38. ವಧೂವರರಿಗೆ ಎಲ್ಲರೂ <u>ಶುಬಾಶಯವನ್ನು</u> ಕೋರಿದರು.

(1) ಶುಭಾಸಯ

(2) ಶುಭಾಷಯ

(3) ಶುಭಾಶಯ

(4) ಸುಧಾರಣೆ ಬೇಕಿಲ್ಲ

39. ತ್ರಿವೇಣಿಯವರು <u>ಮಾನೊವೈಜ್ಞಾನಿಕ</u> ಕಾದಂಬರಿಗಳನ್ನು ಬರೆದಿದ್ದಾರೆ.

(1) ಮನೋವೈಜ್ಞಾನಿಕ

(2) ಮನಾವೈಜ್ಞಾನಿಕ

(3) ಮಾನೊವೈಗ್ನಾನಿಕ

(4) ಸುಧಾರಣೆ ಬೇಕಿಲ್ಲ

40. ಸಾಹಿತ್ಯ <u>ಸಮ್ಮೆಳನದ</u> ಅಧ್ಯಕ್ಷರನ್ನು ಮೆರವಣಿಗೆಯಲ್ಲಿ ತರಲಾಯಿತು.

(1) ಸಮ್ಮೇಳನ

(2) ಸಮ್ಮೆಳಾನ

(3) ಸಮೇಳನ

(4) ಸುಧಾರಣೆ ಬೇಕಿಲ್ಲ

41. ವಾಜಪೇಯಿಯವರ ಕಾಲದಲ್ಲಿ <u>'ರಾಷ್ಟ್ರೀಯ ಹೆದ್ದಾರಿ'</u> ಗಳು ನಿರ್ಮಾಣವಾದವು.

(1) ರಾಷ್ಟ್ರಿಯ ಹೆದ್ದಾರಿ

(2) ರಾಷ್ಟ್ರೀಯ ಎದ್ದಾರಿ

(3) ರಾಸ್ಟ್ರೀಯ ಹೆದ್ದಾರಿ

(4) ಸುಧಾರಣೆ ಬೇಕಿಲ್ಲ



www.shikarat.com

ಸೂಚನೆ : ಕೆಳಗಿನವುಗಳಲ್ಲಿ ಖಾಲಿ ಇರುವ ಜಾಗಕ್ಕೆ ಸರಿಯಾದ ಉತ್ತರವನ್ನು ಸೂಚಿಸಿರಿ. (ಪ್ರಶ್ನೆ ಸಂಖ್ಯೆ 42 – 46)

42. 'ಬೃಹಚ್ಚಕ್ರ' ಪದವು ______ ಸಂಧಿಗೆ ಉದಾಹರಣೆಯಾಗಿದೆ.

(1) ಗುಣ ಸಂಧಿ

(2) ವೃದ್ಧಿ ಸಂಧಿ

(3) ಶ್ಚುತ್ವ ಸಂಧಿ

(4) ಜಸ್ತ್ವ ಸಂಧಿ

43. 'ಶ್ರದ್ಧೆಯೇ ಸಫಲತೆಗೆ ಕಾರಣ' ಎಂಬ ವಾಕ್ಯದಲ್ಲಿರುವುದು ______ ಅವ್ಯಯ.

(1) ಕೃದಂತಾವ್ಯಯ

(2) ಸಂಬಂಧಾರ್ಥಕಾವ್ಯಯ

(3) ಅವಧಾರಣಾರ್ಥ ಅವ್ಯಯ

(4) ಕ್ರಿಯಾರ್ಥಕಾವ್ಯಯ

44. ನಾಮಪದವೂ, ಕ್ರಿಯಾಪದವೂ ಆಗಿ ಬಳಕೆಯಾಗುವ ಪದವೆಂದರೆ ______.

(1) ದೂಡು

(2) ಕಾಡು

(3) ನೀಡು

(4) ಯಾವುದೂ ಅಲ್ಲ

45. ಪಾತರ ಗಿತ್ತಿ ಪಕ್ಕಾ

ನೋಡಿದೇನ ಅಕ್ಕಾ

ಈ ದ್ವಿಪದಿ ______ ಲಯ ದಲ್ಲಿದೆ.

(1) ಮಂದಾನಿಲ

(2) ಲಲಿತ

(3) ಉತ್ಸಾಹ

(4) ತ್ವರಿತ

46. 'ಎಡ ಬಲದಲ್ಲಿ' ಎಂಬುದು ನಾಮಪದದ ______ ಪ್ರಭೇದಕ್ಕೆ ಸೇರಿದೆ.

(1) ಗುಣ ವಾಚಕ

(2) ದಿಗ್ವಾಚಕ

(3) ಸಂಖ್ಯಾ ವಾಚಕ

(4) ಪರಿಮಾಣ ವಾಚಕ



www.shikarat.com

**ಸೂಚನೆ :** ಕೆಳಗಿನ ವಾಕ್ಯಗಳಲ್ಲಿ (ಪ್ರಶ್ನೆ ಸಂಖ್ಯೆ 47 – 51) (1) (2) (3) ಎಂಬ ಗೆರೆ ಎಳೆದ ಭಾಗಗಳಿವೆ. ಈ ಯಾವುದೇ ಭಾಗದಲ್ಲಿ ವ್ಯಾಕರಣ, ಕಾಗುಣಿತ ಅಥವಾ ಚಿಹ್ನೆಗೆ ಸಂಬಂಧಿಸಿದ ದೋಷವಿದ್ದರೆ ಆ ಭಾಗವನ್ನು ಗುರ್ತಿಸಿ. ದೋಷವಿಲ್ಲದಿದ್ದರೆ "ತಪ್ಪಿಲ್ಲ" ಎಂಬ ನಾಲ್ಕನೇ (4) ಭಾಗವನ್ನು ಗುರುತಿಸಿ.

ಉದಾಹರಣೆ :

ಈ ಜೀವಸೃಷ್ಟಿಗೆ ಪ್ರಕೃತಿ (1) ಕಾರಣವಾದಂತೆ (2) ಜೀವನಾಶಕ್ಕೂ ಪ್ರಕೃತಿ ಕಾರಣವಾಗುತ್ತದೆ. (3) ತಪ್ಪಿಲ್ಲ (4)

ಇದರ (3) ಭಾಗದಲ್ಲಿ ಪುನರಾವರ್ತನೆಯಾಗಿರುವ ಪ್ರಕೃತಿ ಪದ ತಪ್ಪು ಆದ್ದರಿಂದ (3) ತಪ್ಪೆಂದು ಭಾವಿಸಿ ಗುರುತಿಸಬಹುದು.

47. ಆಗಿ ಹೋದ (1) ಧುರಂತಕ್ಕೆ (2) ಆತ ನಡುಗಿಹೋದ. (3) ತಪ್ಪಿಲ್ಲ (4)

48. ಒಗೆಯಿಂದಾಗಿ (1) ಕಣ್ಣು ಮೂಗಿನಲ್ಲೆಲ್ಲಾ (2) ನೀರು ತುಂಬಿತು. (3) ತಪ್ಪಿಲ್ಲ (4)

49. ಎಲ್ಲರೂ ದೇವರಿಗೆ (1) ಆರತಿ ಒಪ್ಪಿಸಿ (2) ಕೈಮುಗಿದರು. (3) ತಪ್ಪಿಲ್ಲ (4)

50. ನಾನು ಈಗತಾನೆ (1) ಕಾಫಿಗೆ (2) ಕುಡಿದುಬಂದೆ. (3) ತಪ್ಪಿಲ್ಲ (4)

51. ಬೆಳಿಗ್ಗೆ (1) ಹೂಗಳೆಲ್ಲಾ (2) ಅರಳಿತು. (3) ತಪ್ಪಿಲ್ಲ (4)

**ಸೂಚನೆ :** ಕೆಳಗಿನವುಗಳಲ್ಲಿ ಖಾಲಿ ಇರುವ ಜಾಗಕ್ಕೆ ಸರಿಯಾದ ಉತ್ತರವನ್ನು ಸೂಚಿಸಿರಿ. (ಪ್ರಶ್ನೆ ಸಂಖ್ಯೆ 52 – 60)

52. ವ್ಯಾಕರಣದಲ್ಲಿ 'ಮಾತ್ರೆ' ಎಂದರೆ ______ .

(1) ಗುಳಿಗೆ

(2) ಗಣ

(3) ಅಕ್ಷರ ಉಚ್ಚಾರಣೆಯ ಕಾಲ

(4) ಛಂದೋರೂಪ





www.shikarat.com

53. ಕನ್ನಡವನ್ನು 'ಶಾಸ್ತ್ರೀಯ ಭಾಷೆ ಎಂದು ಘೋಷಿಸಿದ ವರ್ಷ ________.

(1) 2005

(2) 2006

(3) 2007

(4) 2008

54. 'ಈಗೀಗ' ಇದು ________ ವ್ಯಾಕರಣಾಂಶಕ್ಕೆ ಉದಾಹರಣೆಯಾಗಿದೆ.

(1) ನುಡಿಗಟ್ಟು

(2) ದ್ವಿರುಕ್ತಿ

(3) ಜೋಡುನುಡಿ

(4) ಯಾವುದೂ ಅಲ್ಲ

55. 'ಕೆರೆಗೆ ಹಾರ' ಇದು ________ ಸಾಹಿತ್ಯ ಪ್ರಕಾರಕ್ಕೆ ಸೇರುತ್ತದೆ.

(1) ಷಟ್ಪದಿ ಸಾಹಿತ್ಯ

(2) ಜನಪದ ಸಾಹಿತ್ಯ

(3) ರಗಳೆ ಸಾಹಿತ್ಯ

(4) ನವೋದಯ ಸಾಹಿತ್ಯ

56. ________ ಕನ್ನಡದ ಮೊದಲ ರಾಷ್ಟ್ರಕವಿ.

(1) ಬಿ.ಎಂ. ಶ್ರೀ

(2) ಪಂಜೆ ಮಂಗೇಶರಾಯ

(3) ಗೋವಿಂದ ಪೈ

(4) ಕುವೆಂಪು

57. ಕನ್ನಡದ ಮೊದಲ 'ಮಕ್ಕಳ ವಿಶ್ವಕೋಶ' ______.

(1) ಬಿ. ವೆಂಕಟಾಚಾರ್ಯರ ಲೋಕರಹಸ್ಯ

(2) ಕಾರಂತರ ಬಾಲ ಪ್ರಪಂಚ

(3) ಬಿ.ಎಂ.ಶ್ರೀ. ರವರ ಸಂಭಾವನೆ

(4) ತೀ.ನಂ.ಶ್ರೀ. ರವರ ಒಲುಮೆ

58. ಇತ್ತೀಚೆಗೆ ಚಲನಚಿತ್ರವಾಗಿ ತೆರೆ ಕಂಡ 'ಕಿರಗೂರಿನ ಗಯ್ಯಾಳಿಗಳು' ಕಥೆಯನ್ನು ಬರೆದವರು ______.

(1) ಪಿ. ಲಂಕೇಶ್

(2) ಬರಗೂರು ರಾಮಚಂದ್ರಪ್ಪ

(3) ಪೂರ್ಣಚಂದ್ರ ತೇಜಸ್ವಿ

(4) ಟಿ.ಎಸ್. ನಾಗಾಭರಣ

www.shikarat.com

59. ಕನ್ನಡ ಸಾಹಿತ್ಯ ಪರಿಷತ್ತಿನ ಇಂದಿನ ಅಧ್ಯಕ್ಷರು ______

(1) ಶ್ರೀ ಬಿ. ಶಿವಮೂರ್ತಿ ಶಾಸ್ತ್ರಿ

(2) ಶ್ರೀ ಮನು ಬಳಿಗಾರ್

(3) ಶ್ರೀ ಜೆ. ನಾರಾಯಣ

(4) ಶ್ರೀ ಎಂ. ಕಾಂತರಾಜ್ ಅರಸ್

60. ______ ಇವರಿಗೆ 'ಜ್ಞಾನಪೀಠ' ಪ್ರಶಸ್ತಿ ಬಂದಿಲ್ಲ.

(1) ಚಂದ್ರಶೇಖರ ಕಂಬಾರ

(2) ಗಿರೀಶ್ ಕಾರ್ನಾಡ್

(3) ಚಂದ್ರಶೇಖರ ಪಾಟೀಲ್

(4) ವಿನಾಯಕ ಕೃಷ್ಣ ಗೋಕಾಕ್

*ಸೂಚನೆ :* *ಮುಂದಿನ ವಾಕ್ಯಗಳಲ್ಲಿ (ಪ್ರಶ್ನೆ ಸಂಖ್ಯೆ **61 – 65**) ಪದಗಳು ಕ್ರಮಬದ್ಧವಾಗಿಲ್ಲ. ಅವು ಅರ್ಥಪೂರ್ಣವಾಗುವಂತೆ ಗೆರೆ ಎಳೆದು ಸೂಚಿಸಿದ ಭಾಗಗಳನ್ನು ಪುನಃ ಜೋಡಿಸಿ. ಅವುಗಳ ಅನುಕ್ರಮವನ್ನು ಗುರುತಿಸಿ.*

ಉದಾಹರಣೆ :

| ನೋಡಿ | ದುರುಗುಟ್ಟಿ | ಸುಟ್ಟುರಿಯುವಂತೆ | ದೌಡಾಯಿಸಿದಳು |
|---|---|---|---|
| P | Q | R | S |

(1) Q R P S

(2) R S P Q

(3) R Q P S

(4) R P Q S

ಇಲ್ಲಿ Q R P S ಎಂಬುದು ಸರಿಯಾದ ಕ್ರಮ ಆದುದರಿಂದ ಇಲ್ಲಿ (1) ಅನ್ನು ಗುರುತಿಸಬೇಕು.

www.shikarat.com

61. ಎನ್ನುವುದು (P) ಯಾತ್ರೆಯನ್ನೇ (Q) ದೇವರೆಡೆಗಿನ (R) ಸಾಧನೆ. (S)

(1) S P R Q
(2) R Q S P
(3) Q R S P
(4) P Q R S

62. ಹೊಟ್ಟೆಕಿಚ್ಚೆಂಬ (P) ಕನ್ನಡದಲ್ಲಿ (Q) ಮತ್ಸರಕ್ಕೆ (R) ಅರ್ಥಪೂರ್ಣಪದವಿದೆ. (S)

(1) Q R P S
(2) R P S Q
(3) S Q R P
(4) P Q R S

63. ಶ್ರದ್ಧೆಯ ಅಭಾವ (P) ಕ್ಷೇತ್ರಗಳಲ್ಲೂ (Q) ಇಂದು ಎಲ್ಲಾ (R) ಕಂಡುಬರುತ್ತದೆ. (S)

(1) R Q S P
(2) P S R Q
(3) P R Q S
(4) R Q P S

64. ಗಮನವೇ (P) ಸಮಗ್ರವ್ಯಕ್ತಿತ್ವದ (Q) ಇಲ್ಲ (R) ವಿಕಾಸಕ್ಕಿಂದು. (S)

(1) P R Q S
(2) P Q S R
(3) Q S P R
(4) Q S R P

65. ಸಲುಗೆಯಾಗಿ (P) ಕಾರಣವಾಗಬಾರದು (Q) ಅನಾದರಕ್ಕೆ (R) ಪ್ರೀತಿ. (S)

(1) R P S Q
(2) R S P Q
(3) S Q R P
(4) S P R Q





www.shikarat.com

*ಸೂಚನೆಗಳು :* *ಈ ಕೆಳಗೆ (ಪ್ರಶ್ನೆ ಸಂಖ್ಯೆ **66 – 70**) P Q R S ಎಂಬ ನಾಲ್ಕು ವಾಕ್ಯಗಳನ್ನು ಕೊಡಲಾಗಿದೆ. ಈ ವಾಕ್ಯಗಳು ಸ್ಥಾನಪಲ್ಲಟವಾಗಿವೆ. ಅವುಗಳನ್ನು ಅರ್ಥಪೂರ್ಣವಾಗಿ ಜೋಡಿಸುವ ಉತ್ತರವನ್ನು ಗುರುತಿಸಬೇಕು.*

*ಉದಾಹರಣೆ :*

P. ಪುಲಿಗೆರೆ, ಕಿಸುವೊಳಲ್, ಕೊಪ್ಪಳ ಮತ್ತು ಒಕ್ಕುಂದ ಇವೇ ಆ ನಾಲ್ಕು ನಗರಗಳು.

Q. ಒಂಭತ್ತನೆಯ ಶತಮಾನದಲ್ಲಿ ಕನ್ನಡನಾಡು ಕಾವೇರಿಯಿಂದ ಗೋದಾವರಿಯವರೆಗೆ ಹಬ್ಬಿತ್ತು.

R. ಆ ನಾಡಿನಲ್ಲಿನ ನಾಲ್ಕು ನಗರಗಳ ಮಧ್ಯದ ಕನ್ನಡವೇ ಕನ್ನಡದ ತಿರುಳೆಂದು ಕವಿ ಹೇಳಿದ್ದಾನೆ.

S. ಆ ನಾಡಿನಲ್ಲಿ ವಾಸವಾಗಿದ್ದ ಜನತೆಯ ಉನ್ನತ ಸಂಸ್ಕೃತಿಯಿಂದಾಗಿ ಇಡೀ ವಿಶ್ವದಲ್ಲಿ ಕನ್ನಡ ನಾಡು ಒಂದು ವಿಶೇಷ ಸ್ಥಾನವನ್ನು ಪಡೆದಿತ್ತು.

(1) Q S R P

(2) S R Q P

(3) P Q R S

(4) R P Q S

ಇಲ್ಲಿ ಸರಿಯಾದ ಉತ್ತರ **Q S R P** ಆದುದರಿಂದ (1) ನ್ನು ಗುರುತಿಸಬೇಕು.

**66.** P. ನಿಮ್ಮ ಆರ್ಥಿಕ ಅವ್ಯವಸ್ಥೆಗೆ ಕಾರಣವೇನೇ ಇರಲಿ, ಅದನ್ನು ನಿವಾರಿಸಿಕೊಳ್ಳುವ ಯತ್ನ ಮಾಡಬೇಕಾದವರು ನೀವೇ.

Q. ನಿಮ್ಮ ಆರ್ಥಿಕ ತೊಡಕುಗಳನ್ನು ಬಗೆಹರಿಸುವ ಮಾಂತ್ರಿಕ ಉಪಾಯವೇನೂ ನನ್ನ ಹತ್ತಿರ ಇಲ್ಲ.

R. ಸ್ವಲ್ಪ ಮುಂದಾಲೋಚನೆ, ಭವಿಷ್ಯದ ಕಡೆಗೆ ದೃಷ್ಟಿ, ಸಂಯಮದಿಂದ ವೆಚ್ಚ ಇವನ್ನು ನೀವು ಬೆಳೆಸಿಕೊಂಡರೆ ನಿಮ್ಮಿಂದ ಹಣವು ಅಷ್ಟು ಬೇಗನೆ ಜಾರಿ ಹೋಗದು.

S. ಆದರೆ ಪ್ರಾಮಾಣಿಕವಾಗಿ ಯೋಚಿಸಿದರೆ, ಯೋಚಿಸಿದಂತೆ ಕೆಲಸ ಮಾಡಿದರೆ ಖಂಡಿತವಾಗಿಯೂ ಅದು ನಿಮ್ಮಿಂದ ಅಸಾಧ್ಯವಾದ ಸಂಗತಿಯಲ್ಲ.

(1) R P Q S

(2) S R P Q

(3) Q S P R

(4) P Q R S

www.shikarat.com

67. P. ಈ ಆತ್ಮಕಥನವು ನನಗೆ ಇಷ್ಟವಾಗಲು ಹಲವಾರು ಕಾರಣಗಳಿವೆ.

Q. ಮೂರ್ತಿಯವರ 'ಬಾಳಹಾದಿ' ಆತ್ಮಕಥನವು 'ವ್ಯಕ್ತಿಮಹತ್ವ ದ ಭೂಮಿಕೆಯಿಂದ ಸಿದ್ಧವಾಗಿದೆ.

R. ಅವುಗಳಲ್ಲಿ ಮುಖ್ಯವಾದುದು, ಬೆಂಗಳೂರಿನ ಸಾಂಸ್ಕೃತಿಕ ಬದುಕು ಕಳೆದ ಅರ್ಧ ಶತಮಾನದಲ್ಲಿ ಹೇಗೆ ವಿರೂಪಗೊಂಡಿದೆಯೆಂಬುದನ್ನು ಇದು ದಾಖಲಿಸುತ್ತದೆ.

S. ನಮ್ಮಲ್ಲಿ ಆತ್ಮಕಥನಗಳ ಸಂಖ್ಯೆ ಗಣನೀಯವಾಗೇ ಇದೆ.

(1) P Q R S

(2) S Q P R

(3) S P Q R

(4) R S Q P

68. P. ಅಮೆರಿಕಾ ದೇಶದ ಸುಮಾರು ಅರ್ಧದಷ್ಟು ಮನೆಗಳಲ್ಲಿ ಒಂದೋ ಬೆಕ್ಕು ಇಲ್ಲವೆ ನಾಯಿ ಇದ್ದೇ ಇರುತ್ತದೆ.

Q. ಜಾರ್ಜ್ ಡಬ್ಲ್ಯು. ಬುಷ್ ಸಾಕಿದ್ದ ಬೆಕ್ಕಿನ ಹೆಸರು 'ಇಂಡಿಯಾ'.

R. ಜಗತ್ತಿನ ದೇಶಗಳಲ್ಲೆಲ್ಲ ಅಮೆರಿಕಾ ದೇಶದಲ್ಲಿ ಬೆಕ್ಕು ನಾಯಿ ಸಾಕುವವರ ಸಂಖ್ಯೆ ಬಲು ಹೆಚ್ಚು.

S. ಇತ್ತೀಚಿನ ಮಾರ್ಜಾಲಗಣತಿಯ ಪ್ರಕಾರ ಅಲ್ಲಿ ಸುಮಾರು 8 ಕೋಟಿ ಬೆಕ್ಕುಗಳಿವೆಯಂತೆ.

(1) R P S Q
(2) P R S Q
(3) P Q R S
(4) S Q P R

69. P. ಇನ್ನು ನನ್ನ ಬಳಿ ಭಾರಭಾರದ ದಪ್ಪ ದಪ್ಪದ ಬೇಕಾದಷ್ಟು ಬಂಗಾರದ ಸರಗಳಿದ್ದವು.

Q. ಆದರೆ ಈಗ ಮಾತ್ರ ಆಸೆ ಅಂತ ಹಾಕಿಕೊಂಡರೆ ಮನಸ್ಸಿನೊಳಗೆ ಬರೀ ಬೇಸರ, ನಿರಾಶಕ್ತಿ, ಇಂಥದ್ದು ಅಂಥ ಹೇಳಲಿಕ್ಕಾಗದ ಅಸುಖ.

R. ಎಳವೆಯಲ್ಲಿ ಆಭರಣವೆಂದರೆ ನನಗಿದ್ದ ಹುಚ್ಚು ಹೇಳಿ ಮುಗಿಯುವಂಥದಲ್ಲ.

S. ವಜ್ರದ ಓಲೆ ಮತ್ತು ಮೂಗುಬೊಟ್ಟುಗಳನ್ನು ಈಗಾಗಲೇ ಮಾರಿಬಿಟ್ಟಿದ್ದೆ.

(1) R P Q S
(2) R S Q P
(3) S P R Q
(4) S R P Q

www.shikarat.com

70. P. ಈ ವೇಗದಿಂದ ರಾಜಕುಮಾರನಿಗೆ ಮನಸ್ಸಿನಲ್ಲೆ ಪುಕುಪುಕು.

Q. ಕಾಲಿಂದ ಎಕ್ಸ್‌ಲೇಟರ್‌ನ್ನು ದಬಾಯಿಸಿ, ಸ್ಟೀರಿಂಗ್‌ನ್ನು ಗತ್ತಿನಿಂದ ತಿರುಗಿಸಿ ಭುರ್ರೆಂದು ವಾಹನವನ್ನು ಹೊರಡಿಸಿಬಿಟ್ಟರು.

R. ಇಗ್ನೀಷನ್ ಕೀ ತಿರುವಿ ಜೀಪ್‌ಗೆ ಚಾಲನೆಯಿತ್ತರು.

S. ಡ್ರೈವರ್ ಸೀಟಿನಲ್ಲಿ ಸ್ವತಃ ಮಹಾರಾಣಿಯೆ ವಿರಾಜಮಾನರಾದರು. ಪಕ್ಕದಲ್ಲಿ ರಾಜಕುಮಾರ.

(1) PSRQ

(2) SQRP

(3) SPRQ

(4) SRQP

*ಸೂಚನೆ : ಕೆಳಗೆ ಕೊಡಲಾದ ಗಾದೆಗಳ ಅರ್ಥವನ್ನು ಗ್ರಹಿಸಿ ಪೂರ್ಣಗೊಳಿಸಿ (ಪ್ರಶ್ನೆ ಸಂಖ್ಯೆ* ***71 – 73****)*

71. ಒಕ್ಕಣ್ಣನ ರಾಜ್ಯಕ್ಕೆ ಹೋದರೆ

(1) ಒಕ್ಕಣ್ಣು ಮುಚ್ಚಿ ನಡೆಯಬೇಕು

(2) ಒಕ್ಕಣ್ಣು ಮುಚ್ಚಿ ನಡೆಯಬಾರದು

(3) ಇರ್ಕಣ್ಣಿನಿಂದ ನಡೆಯಬೇಕು

(4) ಇರ್ಕಣ್ಣಿಂದ ನಡೆಯಬಾರದು

72. ಅತ್ತೆ ಒಡೆದ ಬಿಂದಿಗೆಗೆ ಮೂರು ಕಾಸು, ಸೊಸೆ ಒಡೆದ ಬಿಂದಿಗೆಗೆ

(1) ಒಂದು ಕಾಸು

(2) ಎರಡು ಕಾಸು

(3) ಆರು ಕಾಸು

(4) ಕಾಸಿಲ್ಲ

73. ಉದ್ದುದ್ದ ಮಾತಿನವರ ಮೊಳಕ್ಕೆ

(1) ಉದ್ದವೇ

(2) ನಿಡಿದೇ

(3) ಮೊಂಡವೇ

(4) ಸಪೂರವೇ

www.shikarat.com

*ಸೂಚನೆ :* ಕೆಳಗೆ ಕೊಡಲಾದ ಒಗಟುಗಳನ್ನು ಬಿಡಿಸಿ, ಉತ್ತರ ಗುರ್ತಿಸಿ. *(ಪ್ರಶ್ನೆ ಸಂಖ್ಯೆ 74 – 76)*

**74.** ಪ್ರಾಕಾರ ಪಚ್ಚೆಕಲ್ಲು, ಗರ್ಭಗುಡಿ ಬಂಗಾರ, ಮೂಲವಿಗ್ರಹ ಬೆಳ್ಳಿಯೇ ಬೆಳ್ಳಿ ಏನದು ?

(1) ಬಾಳೆ

(2) ಹಲಸು

(3) ತೆಂಗು

(4) ಕುಂಬಳ

**75.** ಸಾವಿರಾರು ಸೈನಿಕರನ್ನು ನೀರಲ್ಲಿ ಮುಳುಗಿಸಿ, ಬಿಗಿ ಕಟ್ಟು ಕಟ್ತಾರೆ. ಕಿರೀಟ ತೊಡಿಸಿ ಹೊರಗೆ ಬಿಡ್ತಾರೆ ಏನದು ?

(1) ಮೊಳಕೆ ಕಾಳು

(2) ಉತ್ತರಾಣಿ

(3) ಕಲ್ಲಂಗಡಿ ಹಣ್ಣು

(4) ಗಾಳಿಪಟ

**76.** ಸರದಾರ ಸಾಬರ ತೋಟದಲ್ಲಿ ಬರದಾರ ಸಾಬರ ಬೆಳ್ಳುಳ್ಳಿ ಆಗಿದರೆ ಸಿಪ್ಪೆಯಿಲ್ಲ/ ನುಂಗಿದರೆ ಬೀಜವಿಲ್ಲ

(1) ವೀಳ್ಯದೆಲೆ

(2) ಮಲ್ಲಿಗೆ

(3) ಆಲಿಕಲ್ಲು

(4) ಬೆಳ್ಳಿ

*ಸೂಚನೆ :* ಕೆಳಗಿನ ಪ್ರಶ್ನೆಗಳನ್ನು ಓದಿ ಉತ್ತರವನ್ನು ಗುರುತಿಸಿ. *(ಪ್ರಶ್ನೆ ಸಂಖ್ಯೆ 77 – 90)*

**77.** 'ಇಷ್ಟಿಕಾ' ಇದರ ತದ್ಭವ ರೂಪ ವೇನು ?

(1) ಸುತ್ತಿಗೆ

(2) ಕಟ್ಟಿಗೆ

(3) ಇಟ್ಟಿಗೆ

(4) ಕಠಿಣ

**78.** 'ಕಂಚು' ಇದರ ತತ್ಸಮ ರೂಪ ವೇನು ?

(1) ಕಾಂಚ

(2) ಕಾಂಚ್ಯಾ

(3) ಕಾಂಸ್ಯ

(4) ಕಂಪು

**79.** 'ಸೊಗ' ಪದದ ತದ್ಭವ ರೂಪವೇನು ?

(1) ಸುಕ

(2) ಸುಗ್ಗಿ

(3) ಸುಖ

(4) ಸ್ವರ್ಗ

www.shikarat.com

80. 'ಚಂದ್ರಮುಖಿ' ಇಲ್ಲಿರುವ ಅಲಂಕಾರ ಯಾವುದು ?

(1) ರೂಪಕ

(2) ಉಪಮಾ

(3) ಶ್ಲೇಷ

(4) ಸ್ವಭಾವೋಕ್ತಿ

81. 'ರಾಮಧಾನ್ಯ ಚರಿತೆ' ಯಲ್ಲಿ ಯಾವುದರ ನಡುವೆ ಜಗಳ ಉಂಟಾಯಿತು ?

(1) ಹುಲಿ – ಹಸು

(2) ಮಲ್ಲಿಗೆ – ಸಂಪಿಗೆ

(3) ರಾಗಿ – ಭಕ್ತಿ

(4) ನವಣೆ – ಗೋಧಿ

82. ಈ ಕೆಳಗಿನ ಯಾವ ಪದವು ಹೊಸಗನ್ನಡದಲ್ಲಿ ಹೀನಾರ್ಥ ಪ್ರಾಪ್ತಿಗೆ ಉದಾಹರಣೆಯಾಗಿದೆ ?

(1) ಹೊನ್ನು

(2) ಬಾಳ್

(3) ಬೆಣ್ಣೆ

(4) ಕೂಳ್

83. ಕನ್ನಡದ ವರ್ಣಮಾಲೆಯಲ್ಲಿನ ವರ್ಗೀಯ ವ್ಯಂಜನಗಳಲ್ಲಿನ ಪಂಚಮಾಕ್ಷರಗಳನ್ನು ಏನೆಂದು ಕರೆಯಲಾಗಿದೆ ?

(1) ಯೋಗವಾಹಗಳು

(2) ಸಂಧ್ಯಕ್ಷರಗಳು

(3) ಅನುಸ್ವಾರಗಳು

(4) ಅನುನಾಸಿಕಗಳು

84. ಕನ್ನಡದಲ್ಲಿ 'ರಾಷ್ಟ್ರಕವಿ' ಬಿರುದು ಪಡೆದ ಕವಿಗಳು

(1) ಐದು

(2) ಎಂಟು

(3) ನಾಲ್ಕು

(4) ಮೂರು

85. 82 ನೆಯ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ ನಡೆದ ಸ್ಥಳ ಯಾವುದು ?

(1) ಬೆಳಗಾವಿ

(2) ಶ್ರವಣ ಬೆಳಗೊಳ

(3) ಕೊಪ್ಪಳ

(4) ರಾಯಚೂರು

86. ಹೆಚ್.ಎಲ್. ನಾಗೇಗೌಡರು ಸ್ಥಾಪಿಸಿರುವ ಸಂಸ್ಥೆ ಯಾವುದು ?

(1) ಕಲಾಗ್ರಾಮ

(2) ಜಾನಪದ ಲೋಕ

(3) ರಂಗ ಶಂಕರ

(4) ರಂಗಾಯಣ

87. ನಾಮಪದಗಳ ಬದಲಾಗಿ ಉಪಯೋಗಿಸುವ ಪದಗಳು

(1) ವಿಭಕ್ತಿಗಳು

(2) ವಚನಗಳು

(3) ಸಮಾಸಗಳು

(4) ಸರ್ವನಾಮಗಳು

www.shikarat.com

88. ‘ಮುಂಡಿಗೆಗಳು’ ಬರೆದ ಕವಿ ಯಾರು ?

(1) ಆಂಡಯ್ಯ

(2) ಕನಕದಾಸರು

(3) ಕೇಶಿರಾಜ

(4) ಬೇಂದ್ರೆ

89. ‘ಇಜ್ಜೋಡು’ ಈ ಕಾದಂಬರಿಯ ಕರ್ತೃ ಯಾರು ?

(1) ಎಸ್.ಎಲ್. ಭೈರಪ್ಪ

(2) ಪಿ. ಲಂಕೇಶ್

(3) ವಿ.ಕೃ. ಗೋಕಾಕ್

(4) ವಿ.ಎಂ. ಇನಾಂದಾರ್

90. ‘ಬಂಜೆ’ ಪದದ ತತ್ಸಮ ರೂಪ ವೇನು ?

(1) ವಂದನೆ

(2) ವಂಧ್ಯಾ

(3) ಗೊಡ್ಡಿ

(4) ನಿಷ್ಫಲ

*ಸೂಚನೆ : ಕೆಳಗೆ ಕೊಟ್ಟಿರುವ ಗದ್ಯ ಭಾಗವನ್ನು ಓದಿ ಅರ್ಥ ಗ್ರಹಿಸಿ ಕೇಳಲಾದ ಪ್ರಶ್ನೆಗಳಿಗೆ ಸೂಕ್ತ ಉತ್ತರವನ್ನು ಗುರುತಿಸಿ. (ಪ್ರಶ್ನೆ ಸಂಖ್ಯೆ 91 – 95)*

ಮಾನವನ ಕ್ರಾಂತಿಕಾರಕ ಕ್ರಿಯಾಶೀಲತೆಯ ಬೆಳವಣಿಗೆಯ ಪ್ರತೀಕವೇ ಜಾಗತೀಕರಣವಾಗಿದೆ. ವೈಚಾರಿಕತೆ ಬೆಳೆದಂತೆಲ್ಲಾ ಮಾನವ ತನ್ನ ಬಯಕೆ, ಬೇಡಿಕೆಗಳನ್ನು ಯಾವುದೇ ನಿರ್ಬಂಧವಿಲ್ಲದೆ ಈಡೇರಿಸಿಕೊಳ್ಳುವುದಕ್ಕೋಸ್ಕರ ನಡೆಸಿದ ಆವಿಷ್ಕಾರದ ಫಲವಾಗಿ ಜಾಗತೀಕರಣವು ಉಗಮವಾಯಿತು. ಜಾಗತೀಕರಣ ಎಂದರೆ ದೇಶೀಯ ಆರ್ಥಿಕತೆಯನ್ನು ವಿಶ್ವದ ಆರ್ಥಿಕತೆಯೊಂದಿಗೆ ಸಂಘಟಿಸುವ ವಿದ್ಯಮಾನವಾಗಿದೆ. ಅಂತರರಾಷ್ಟ್ರೀಯ ಮಟ್ಟದಲ್ಲಿ ಯಾವುದೇ ನಿರ್ಬಂಧವಿಲ್ಲದೆ ವಿಶ್ವದ ಬಂಡವಾಳ, ಸರಕು ಮತ್ತು ಸೇವೆಗಳ ಹರಿವು ಹಾಗೂ ಅವುಗಳ ಉಪಯೋಗಗಳ ವಿನಿಮಯವಾಗುವುದನ್ನು ಜಾಗತೀಕರಣ ಎನ್ನುತ್ತೇವೆ.

ಜಾಗತೀಕರಣವು ಭಾರತದ ಅರ್ಥವ್ಯವಸ್ಥೆಯನ್ನು ಬಹಿರ್ಮುಖವಾಗಿಸಿದೆ. ಅಂದರೆ ಈಗ ಭಾರತದ ಅರ್ಥವ್ಯವಸ್ಥೆಯು ಜಾಗತಿಕ ಅರ್ಥವ್ಯವಸ್ಥೆಗೆ ತೆರೆದುಕೊಂಡಿದೆ. 8 ನೇ



www.shikarat.com

ಪಂಚವಾರ್ಷಿಕ ಯೋಜನೆಯಿಂದ ಜಾಗತೀಕರಣ, ಖಾಸಗೀಕರಣ ಹಾಗೂ ಉದಾರೀಕರಣಕ್ಕೆ ಭಾರತ ತನ್ನನ್ನು ತಾನು ತೆರೆದುಕೊಂಡಿತು. ಕೈಗಾರಿಕಾ ಕ್ರಾಂತಿಗೆ ದಾರಿ ಮಾಡಿಕೊಟ್ಟಿತು. ಇದರ ಪರಿಣಾಮವಾಗಿ ವಿದೇಶೀ ಬಂಡವಾಳ ಹೂಡಿಕೆ ಹಾಗೂ ಖಾಸಗಿ ಬಂಡವಾಳ ಹೂಡಿಕೆಯಲ್ಲಿಯೂ ಹೆಚ್ಚಳ ಉಂಟಾಗಿ ಬೃಹತ್ ಕೈಗಾರಿಕೆಗಳು ಪ್ರಾರಂಭವಾದವು. ಇದರಿಂದ ಉತ್ಪಾದನೆಯಲ್ಲಿಯ ಹೆಚ್ಚಳದ ಉತ್ಪಾದನೆಗೆ ಮಾರುಕಟ್ಟೆಯೂ ಬೇಕಾಯಿತು.

ಅನಭಿವೃದ್ಧ ರಾಷ್ಟ್ರಗಳಲ್ಲಿ ಕಚ್ಚಾವಸ್ತುಗಳಿದ್ದರೂ ಬಂಡವಾಳ ಹಾಗೂ ತಾಂತ್ರೀಕರಣ ಕೊರತೆಯಿಂದ ಅಭಿವೃದ್ಧಿ ಹೊಂದಿಲ್ಲದುದನ್ನು ಕಂಡು ಮುಂದುವರಿದ ರಾಷ್ಟ್ರಗಳು GATT ಸಂಸ್ಥೆಯನ್ನು ಹುಟ್ಟು ಹಾಕಿದರು. ಪ್ರಸ್ತುತ ಇಂದು ವಿಶ್ವವ್ಯಾಪಾರ ಸಂಘಟನೆಯು (WTO) ಮಹತ್ ಸಂಸ್ಥೆಯಾಗಿ ಪರಿವರ್ತನೆ ಹೊಂದಿದೆ. ಜಾಗತೀಕರಣದ ಸಾಧನೆಯಲ್ಲಿ ದಕ್ಷಿಣ ಏಷ್ಯಾ ರಾಷ್ಟ್ರಗಳು ಮುಂಚೂಣಿಯಲ್ಲಿವೆ. ಚೀನಾ ಮೊದಲ ಸ್ಥಾನವನ್ನು ಪಡೆದಿದ್ದು ಭಾರತ 4 ನೇ ಸ್ಥಾನದಲ್ಲಿದೆ.

ಜಾಗತೀಕರಣದ ಪರಿಣಾಮವಾಗಿ ದೇಶದ ಆರ್ಥಿಕತೆಗೆ (FDI) ವಿದೇಶೀ ನೇರ ಹೂಡಿಕೆ ಮತ್ತು (FIT) ವಿದೇಶೀ ಸಾಂಸ್ಥಿಕ ಹೂಡಿಕೆಗಳು ಹೆಚ್ಚಿನ ಪ್ರಮಾಣದಲ್ಲಿ ಹರಿದು ಬಂದವು 1990 – 91 ರಲ್ಲಿ ವಿದೇಶೀ ಹೂಡಿಕೆಯು 100 ಮಿಲಿಯನ್ ಡಾಲರ್ ಇದ್ದುದು 2011 – 12 ರ ವೇಳೆಗೆ 63,366 ಮಿಲಿಯನ್ ಡಾಲರಗಳಿಗೆ ಹೆಚ್ಚಿದೆ. ಅಧಿಕ ಉದ್ಯೋಗಗಳು ಸೃಷ್ಟಿಯಾದವು, ತಲಾ ಆದಾಯ ಹೆಚ್ಚಿತು. ನೂತನ ತಂತ್ರಜ್ಞಾನಗಳ ಪರಿಚಯವಾದವು. ಗೃಹೋಪಯೋಗಿ ಮತ್ತು ಐಷಾರಾಮಿ ವಸ್ತುಗಳ ಬೆಲೆಯಲ್ಲಿ ಇಳಿಕೆ ಉಂಟಾಯಿತು. ಸೇವಾಕ್ಷೇತ್ರ ಅಭಿವೃದ್ಧಿ ಹೊಂದಿತಲ್ಲದೆ, ಭಾರತವು ಚೀನಾ ನಂತರದ ಬೃಹತ್ ಆರ್ಥಿಕ ವ್ಯವಸ್ಥೆಯಾಗಿ ಹೊರ ಹೊಮ್ಮಿತು. ನಗರಗಳ ಬೆಳವಣಿಗೆ, ಮಾಹಿತಿ ತಂತ್ರಜ್ಞಾನದ ಅಭಿವೃದ್ಧಿಯೂ ಉಂಟಾಯಿತು. ಜೊತೆಗೆ ಪ್ರವಾಸೋದ್ಯಮವೂ ಅಭಿವೃದ್ಧಿ ಹೊಂದಿತು.

ಜಾಗತೀಕರಣದ ಪರಿಣಾಮವಾಗಿ ಗುಡಿ ಕೈಗಾರಿಕೆಗಳು, ಸಾಂಪ್ರದಾಯಿಕ ಕೃಷಿ ಪದ್ಧತಿಗಳು ತಮ್ಮ ಅಸ್ತಿತ್ವವನ್ನು ಕಳೆದುಕೊಳ್ಳುತ್ತಿವೆ. ಮುಂದುವರಿದ ರಾಷ್ಟ್ರಗಳು ಅಭಿವೃದ್ಧಿ ಹೊಂದುತ್ತಿರುವ ರಾಷ್ಟ್ರಗಳನ್ನು ನಿಯಂತ್ರಿಸುತ್ತಿವೆ.



www.shikarat.com

ಒಂದು ವೇಳೆ ಈ ವಿದೇಶೀ ಕಂಪನಿಗಳು ತಾವು ಹೂಡಿರುವ ಬಂಡವಾಳವನ್ನು ಹಿಂತೆಗೆದುಕೊಂಡಲ್ಲಿ ಹೂಡಿಕೆ ಮಾಡಲ್ಪಟ್ಟ ದೇಶದಲ್ಲಿ ಆರ್ಥಿಕ ಅಸ್ಥಿರತೆ ಉಂಟಾಗುತ್ತದೆ. ವಿದೇಶೀ ಸಂಸ್ಕೃತಿಯ ಅನುಕರಣೆಯಾಗುತ್ತಿದೆ. ಮಾರುಕಟ್ಟೆಯಲ್ಲಿ ವಿದೇಶೀ ಮತ್ತು ಸ್ವದೇಶೀ ಕಂಪನಿಗಳ ನಡುವೆ ಸ್ಪರ್ಧೆ ಹೆಚ್ಚಾಗಿದೆ. ಕೈಗಾರಿಕಾ ತ್ಯಾಜ್ಯ ಹೆಚ್ಚಾಗಿದ್ದು ಪರಿಸರದ ಅವನತಿಗೆ ಕಾರಣವಾಗಿದೆ. ಅಧಿಕ ಯಂತ್ರೋಪಕರಣಗಳ ಬಳಕೆ ಹೆಚ್ಚಾಗಿ ಕಾರ್ಮಿಕರ ಸಂಖ್ಯೆ ಕಡಿಮೆಯಾಗತೊಡಗಿದೆ.

ಆದರೂ ಜಾಗತೀಕರಣ ಹೊಸ ವಿಶ್ವವನ್ನು ಹೊಸ ಆಯಾಮವನ್ನು, ನವೀನ ಜೀವನ ಶೈಲಿಯನ್ನು ಹುಟ್ಟುಹಾಕಿದೆ ಎಂಬುದನ್ನು ಅಲ್ಲಗಳೆಯುವಂತಿಲ್ಲ, ತಂತ್ರಜ್ಞಾನದ ಆವಿಷ್ಕಾರಗಳೆಲ್ಲವನ್ನು ನಾವೆಲ್ಲ ಉಪಯೋಗಿಸಲು ಲಭ್ಯವಾದದ್ದು ಜಾಗತೀಕರಣದಿಂದಲೇ. ಜಾಗತೀಕರಣವನ್ನು ನಾವು ನಮ್ಮ ದೇಶದ ಅಭಿವೃದ್ಧಿಗೆ ಪೂರಕವಾಗಿ ಬಳಸಿಕೊಳ್ಳಬೇಕಾಗಿದೆ. ಇದರ ಸವಾಲುಗಳನ್ನೆದುರಿಸಿ ಒಳ್ಳೆಯ ಅಂಶಗಳನ್ನು ಭಾರತದ ಮಾರುಕಟ್ಟೆ ಶಿಕ್ಷಣ, ತಂತ್ರಜ್ಞಾನ ಮತ್ತು ಉದ್ಯೋಗಾಧಾರಿತ ವಲಯಗಳಲ್ಲಿ ಬಳಕೆ ಮಾಡಿಕೊಳ್ಳಲು ಯತ್ನಿಸಬೇಕಿದೆ.

**91.** ಭಾರತದಲ್ಲಿ ವಿದೇಶೀ ಹೂಡಿಕೆಯು 2011 – 12 ರ ವೇಳೆಗೆ ಎಷ್ಟು ಮಿಲಿಯನ್ ಡಾಲರ್‌ಗಳಿಗೆ ಹೆಚ್ಚಿತ್ತು ?

(1) 62,366 ಮಿಲಿಯನ್ ಡಾಲರ್

(2) 62,363 ಮಿಲಿಯನ್ ಡಾಲರ್

(3) 63,366 ಮಿಲಿಯನ್ ಡಾಲರ್

(4) 63,360 ಮಿಲಿಯನ್ ಡಾಲರ್

www.shikarat.com

**92.** ವಿದೇಶೀ ಕಂಪನಿಗಳು ತಾವು ಹೂಡಿರುವ ಬಂಡವಾಳವನ್ನು ಹಿಂದೆಗೆದುಕೊಂಡಲ್ಲಿ ಹೂಡಿಕೆ ಮಾಡಲ್ಪಟ್ಟ ದೇಶದಲ್ಲಿ ಉಂಟಾಗುವುದೇನು ?

(1) ಆರ್ಥಿಕ ಸ್ಥಿರತೆ

(2) ಆರ್ಥಿಕ ಅಸ್ಥಿರತೆ

(3) ಆರ್ಥಿಕ ಸದೃಢತೆ

(4) ಆರ್ಥಿಕ ಸಬಲತೆ

93. ಜಾಗತೀಕರಣವೆಂದರೆ, ದೇಶೀಯ ಆರ್ಥಿಕತೆಯನ್ನು ಯಾವ ಆರ್ಥಿಕತೆಯೊಂದಿಗೆ ಸಂಘಟಿಸುವ ವಿದ್ಯಮಾನವಾಗಿದೆ ?

(1) ಏಷ್ಯಾದ ಆರ್ಥಿಕತೆ

(2) ವಿಶ್ವದ ಆರ್ಥಿಕತೆ

(3) ಚೀನಾದ ಆರ್ಥಿಕತೆ

(4) ಇತರೆ ಪಕ್ಕದ ರಾಷ್ಟ್ರಗಳೊಂದಿಗೆ ಮಾತ್ರದ ಆರ್ಥಿಕತೆ

94. ಜಾಗತೀಕರಣದ ಸಾಧನೆಯಲ್ಲಿ ಯಾವ ರಾಷ್ಟ್ರಗಳು ಅಗ್ರಸ್ಥಾನದಲ್ಲಿವೆ ?

(1) ಉತ್ತರ ಏಷ್ಯಾ ರಾಷ್ಟ್ರಗಳು

(2) ದಕ್ಷಿಣ ಏಷ್ಯಾ ರಾಷ್ಟ್ರಗಳು

(3) ಪೂರ್ವ ಏಷ್ಯಾ ರಾಷ್ಟ್ರಗಳು

(4) ಪಶ್ಚಿಮ ಏಷ್ಯಾ ರಾಷ್ಟ್ರಗಳು

95. ಜಾಗತೀಕರಣದ ಪರಿಣಾಮವಾಗಿ ದೇಶದ ಆರ್ಥಿಕತೆಗೆ ಯಾವ ಹೂಡಿಕೆಗಳು ಹೆಚ್ಚಿನ ಪ್ರಮಾಣದಲ್ಲಿ ಹರಿದು ಬಂದವು ?

(1) ವಿದೇಶೀ ಅಪ್ರತ್ಯಕ್ಷ ಹೂಡಿಕೆ ಮತ್ತು ವಿದೇಶೀ ಸಾಂಸ್ಥಿಕ ಹೂಡಿಕೆ

(2) ವಿದೇಶೀ ನೇರ ಹೂಡಿಕೆ ಮತ್ತು ವಿದೇಶೀ ಸಾಂಸ್ಥಿಕ ಹೂಡಿಕೆ

(3) ವಿದೇಶೀ ತಾಂತ್ರಿಕ ಹೂಡಿಕೆ ಮತ್ತು ವಿದೇಶೀ ಅಸಾಂಸ್ಥಿಕ ಹೂಡಿಕೆ

(4) ವಿದೇಶೀ ನಿರ್ಬಂಧಿತ ಹೂಡಿಕೆ ಮತ್ತು ವಿದೇಶೀ ಕ್ರಿಯಾಶೀಲ ಹೂಡಿಕೆ

***ಸೂಚನೆ :*** *ಕೆಳಗಿನವುಗಳಲ್ಲಿ ಖಾಲಿ ಇರುವ ಜಾಗಕ್ಕೆ ಸರಿಯಾದ ಉತ್ತರವನ್ನು ಸೂಚಿಸಿರಿ. (ಪ್ರಶ್ನೆ ಸಂಖ್ಯೆ **96 – 100**)*

96. ಸಿಂಹಪ್ರಾಸ ಎಂದರೆ ________ .

(1) ಪ್ರತಿ ಪಾದದ ಪ್ರಾಸಾಕ್ಷರ ಹಿಂದಿನ ಅಕ್ಷರ ಹ್ರಸ್ವವಾಗುವುದು

(2) ಪ್ರತಿ ಪಾದದ ಪ್ರಾಸಾಕ್ಷರ ಮುಂದಿನ ಅಕ್ಷರ ದೀರ್ಘವಾಗುವುದು

(3) ಪ್ರತಿ ಪಾದದ ಅಕ್ಷರದ್ವಿತ್ವ ವಾಗುವುದು

(4) ಪ್ರತಿ ಪಾದದ ಪ್ರಾಸಾಕ್ಷರ ಪುನರಾವರ್ತನೆಯಾಗುವುದು

www.shikarat.com

97. ಕನ್ನಡದ ಕವಿಗಳು ಬಳಸಿರುವ ಏಳು ಗಣಗಳುಳ್ಳ ಅತಿ ಚಿಕ್ಕ ಛಂದಸ್ಸು ________.

(1) ಚೌಪದಿ

(2) ಗೀತಿಕೆ

(3) ಏಳೆ

(4) ತ್ರಿಪದಿ

98. ತತ್ವಗಳ ಪಾದದ ಕೊನೆಯಲ್ಲಿ ಉಳಿಯುವ ಒಂದು ಬಿಡಿ ಅಕ್ಷರ ________.

(1) ವಡಿ

(2) ಮುಡಿ

(3) ಪ್ಲುತ

(4) ತ್ರಿಕ

99. ಪಂಚಮೀ ವಿಭಕ್ತಿಯ ಕಾರಕ ________

(1) ಅಪಾದಾನ

(2) ಸಂಪ್ರದಾನ

(3) ಸಂಬಂಧ

(4) ಅಧಿಕರಣ

100. ______ ಸಮಾನ ಶಿಥಿಲದ್ವಿತ್ವವಾಗಿದೆ.

(1) ಬೆಮರ್ಗಳ

(2) ಕುಳಿರ್ಗಾಳಿ

(3) ತೊಡರ್ದಂ

(4) ಮಗುಳ್ಗೆ

www.shikarat.com